## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಸಿಒಇ ಸಂಸ್ಥೆಗಳಲ್ಲಿ ಸ್ಥಾಪಿಸಿರುವ ಪ್ಲೇಸ್‌ಮೆಂಟ್ ಸೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ಅಧಿಕಾರಿಗಳು/ಕಿರಿಯ ತರಬೇತಿ ಅಧಿಕಾರಿಗಳಿಗೆ ಗೌರವ ಸಂಭಾವನೆ ನೀಡುವ ಬಗ್ಗೆ.

**ಓದಲಾಗಿದೆ:** ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಇವರ ಪತ್ರ ಸಂ. ಉತಇ/ತರಬೇತಿ/ಸಿಒಇ-Placement/ವಿವ-33/2009-10, ದಿನಾಂಕ: 05/08/2009ಕ್ಕೆ ಅಂತ್ಯಗೊಂಡ ಪತ್ರ ವ್ಯವಹಾರ.

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಸಿಒಇ ಸಂಸ್ಥೆಗಳಲ್ಲಿ ಸ್ಥಾಪಿಸಿರುವ ಪ್ಲೇಸ್‌ಮೆಂಟ್ ಸೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ಅಧಿಕಾರಿಗಳು/ಕಿರಿಯ ತರಬೇತಿ ಅಧಿಕಾರಿಗಳಿಗೆ ಪ್ರತಿ ತಿಂಗಳು ರೂ.3000/-ರಂತೆ ಗೌರವ ಧನವನ್ನು ನೀಡಲು ಹಾಗೂ ಈ ವೆಚ್ಚವನ್ನು ನಿರ್ದೇಶನಾಲಯದಲ್ಲಿ ಸ್ಥಾಪಿಸಲಾಗಿರುವ ಎಸ್‌ಪಿಐಯು (ಸ್ಟೇಟ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಯುನಿಟ್) ಅಡಿಯಲ್ಲಿ ಬರುವ ಲೆಕ್ಕ ಶೀರ್ಷಿಕೆ 2230-03-101-0-30-059 ಇದರ ಖರ್ಚು ಅಡಿಯಲ್ಲಿ ಭರಿಸಲು ಆದೇಶ ಹೊರಡಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

### ಸರ್ಕಾರಿ ಆದೇಶ ಸಂಖ್ಯೆ ಕಾಇ 324 ಇಇಐ 2009 ಬೆಂಗಳೂರು, ದಿನಾಂಕ: 29/04/2011.

ಸಿಒಇ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ಲೇಸ್‌ಮೆಂಟ್ ಸೆಲ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತರಬೇತಿ ಅಧಿಕಾರಿಗಳು/ಕಿರಿಯ ತರಬೇತಿ ಅಧಿಕಾರಿಗಳಿಗೆ ಮಾಸಿಕ ₹ 1,000/- (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳ ಗೌರವ ಸಂಭಾವನೆಯನ್ನು ಭವಿಷ್ಯವರ್ತಿಯಾಗಿ ಪಾವತಿಸುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಈ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2230-03-101-0-30-059(ಎಸ್‌ಪಿಐಯು) ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 86 ವೆಚ್ಚ-9/2011, ದಿನಾಂಕ: 06/04/2011 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/4/11
(ಜೆ.ಎಸ್.ವಿಶ್ವನಾಥಪ್ಪ)
ಪೀಠಾಧಿಕಾರಿ (ಪ್ರ)
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಗೆ:

ಸಂಕಲನಕಾರರು, ಸರ್ಕಾರಿ ಹೊರವಲಯ ಮುದ್ರಣಾಲಯ, ಕಂಗೇರಿ, ಮೈಸೂರು ರಸ್ತೆ, ಬೆಂಗಳೂರು-59 ಇವರ ಮಾಹಿತಿಗೆ ಹಾಗೂ ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಸದರಿ ಪ್ರಕಟಣೆಯ 50 ಪ್ರತಿಗಳನ್ನು ಪೀಠಾಧಿಕಾರಿ-4, ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ-411, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು
3) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ.
4) ಖಜಾನಾಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
5) ಉಪನಿರ್ದೇಶಕರು, ಖಜಾನೆ ಎನ್.ಎಂ.ಸಿ., ಖನಿಜಭವನ, ರೇಸ್‌ಕೋರ್ಸ್‌ರೋಡ್, ಬೆಂಗಳೂರು.
6) ಸರ್ಕಾರದ ಅಧೀನಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವೆಚ್ಚ-9, ವಿಧಾನಸೌಧ.
7) ಸರ್ಕಾರದ ಕಾರ್ಯದರ್ಶಿಯವರ ಪ್ರಾಪ್ತಾಂಕಿತ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸಸೌಧ.
8) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸಸೌಧ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ